<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 1396/2021 ಸಿಡಬ್ಲೂ : 1 ಪಿಡಬ್ಲೂಃ 1

ಪ್ರಮಾಣವಚನ ದಿಃ 06-03-2026
ಬೋಧಿಸಲಾಯಿತು

ಹೆಸರು : ರಾಜಶೇಖರ್

ತಂದೆ ಹೆಸರು : ವಿಟೋಬಾ

ವಯಸ್ಸು : 45 ವರ್ಷ

ಉದ್ಯೋಗ : ಪಿ ಐ, ಡಿ ಸಿ ಆರ್ ಇ, ಯಾದಗಿರಿ,

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಪೆಬ್ರವರಿ 2020 ರಿಂದ ಡಿಸೆಂಬರ್ 2021 ರವರೆಗೆ ಸಿ ಪಿ ಐ ಸೇಡಂ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.14-04-2021 ಮಧ್ಯಾಹ್ನ ಕಛೇರಿಯಲ್ಲಿ ಇದ್ದಾಗ ಸೇಡಂ ನಗರದ ಬಸ್ಸು ನಿಲ್ದಾಣ ಹತ್ತಿರ ಇರುವ ಸವೇರಾ ಲಾಡ್ಜ ನಲ್ಲಿ ವೇಶ್ಯಾವಾಟಿಕೆ ನಡೆದಿರುವ ಮಾಹಿತಿ ಬಂದ ಮೇರೆಗೆ ಕೂಡಲೇ ಪಂಚರಾದ ಚಾ ಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ನಂತರ ಅದೇ ರೀತಿ ಸಿಬ್ಬಂದಿಯವರಾದ ಚಾ ಸಾ 6 ರಿಂದ 13 ರವರನ್ನು ಬರಮಾಡಿಕೊಂಡು ಮಾಹಿತಿ ಬಂದ ವಿಷಯವನ್ನು ಸದರಿಯವರಿಗೆ ತಿಳಿಸಿ 04-00 ಗಂಟೆ ಸುಮಾರಿಗೆ ಠಾಣೆಯಿಂದ ಹೊರಟು ಬಾತಮಿ ಬಂದ ಸ್ಥಳಕ್ಕೆ ಹೋಗಿ ದೂರದಲ್ಲಿ ನಿಂತು ಖಚಿತ ಪಡಿಸಿಕೊಂಡು ರೂಂ. ನಂ. 9 ಮತ್ತು 11 ರಲ್ಲಿ ವೇಶ್ಯಾವಾಟಿಕೆ ನಡೆದಿರುವ ಬಗ್ಗೆ ಖಚಿತ ಪಡಿಸಿಕೊಂಡು ದಾಳಿ ಮಾಡಿ ರೂ. ನಂ. 9 ತೆರೆದು ನೋಡಲಾಗಿ ಅದರಲ್ಲಿ ಒಬ್ಬ ವ್ಯಕ್ತಿ ಮತ್ತು ಒಬ್ಬ ಮಹಿಳೆ ಅರ್ದ ನಗ್ನ ಅವಸ್ಥೆಯಲ್ಲಿ ಕಂಡು ಬಂದಿದ್ದು. ಸದರಿ ವ್ಯಕ್ತಿಗೆ ಆತನ ಹೆಸರನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ವಿಶ್ವನಾಥ ಜಮಾದಾರ್ ಎಂದು ತಿಳಿಸಿದನು. ನಂತರ ನಮ್ಮ ಮಹಿಳಾ ಸಿಬ್ಬಂದಿಯ ಸಹಾಯದಿಂದ ಅಲ್ಲಿದ ಮಹಿಳೆಗೆ ವಿಚಾರಿಸಲಾಗಿ ಅವಳು ತನ್ನ ಹೆಸರು ನಿಂಗಮ್ಮ ಪೂಜಾರಿ ಎಂದು ತಿಳಿಸಿದ್ದು ಮತ್ತು ಅವಳನ್ನು ವಿಚಾರಿಸಿದಾಗ ಅವಳು ಸದರಿ ಲಾಡ್ಜ ನ ಮಾಲಿಕನಾದ ಮೂರನೇ ಆರೋಪಿತನು ನಮ್ಮನ್ನು ಕೂಲಿಗಾಗಿ ಇಟ್ಟುಕೊಂಡು ಲಾಡ್ಜಗೆ ಬರುವ ಪ್ರತಿ ಯೊಬ್ಬ ಪುರುಷನೊಂದಿಗೆ ಮಲಗಿಕೊಳ್ಳಬೇಕು ಅಂತಾ ಹೇಳಿದ್ದಾರೆ

ಎಂದು ತಿಳಿಸಿರುತ್ತಾರೆ. ಅದಕ್ಕೆ ದಿನಾಲೂ ರೂ.500/- ಕೂಲಿ ಕೊಡುತ್ತಾನೆ ಎಂದು ತಿಳಿಸಿದಳು. ನಂತರ ವಿಶ್ವನಾಥ ಇವರ ಹತ್ತಿರ ರೂ.1750/- ನಗದು ಹಣ ಮತ್ತು ಒಂದು ಕಾಂಡೋಮ್ ಪಾಕೇಟನ್ನು ವಶಕ್ಕೆ ಪಡಿಸಿಕೊಂಡಿರುತ್ತೇನೆ. ರೂ. ನಂ. 11 ತೆರೆದು ನೋಡಲಾಗಿ ಅದರಲ್ಲಿ ಕೂಡ ಒಬ್ಬ ವ್ಯಕ್ತಿ ಮತ್ತು ಒಬ್ಬ ಮಹಿಳೆ ಅರ್ದ ನಗ್ನ ಅವಸ್ಥೆಯಲ್ಲಿ ಕಂಡು ಬಂದಿದ್ದು. ಸದರಿ ವ್ಯಕ್ತಿಗೆ ಆತನ ಹೆಸರನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಸಾಬಣ್ಣ ಎಂದು ತಿಳಿಸಿದನು. ನಂತರ ನಮ್ಮ ಮಹಿಳಾ ಸಿಬ್ಬಂದಿಯ ಸಹಾಯದಿಂದ ಅಲ್ಲಿದ ಮಹಿಳೆಗೆ ವಿಚಾರಿಸಲಾಗಿ ಅವಳು ತನ್ನ ಹೆಸರು ನಾಗಮ್ಮ ಎಂದು ತಿಳಿಸಿದ್ದು ಮತ್ತು ಅವಳನ್ನು ವಿಚಾರಿಸಿದಾಗ ಅವಳು ಸದರಿ ಲಾಡ್ಜ ನ ಮಾಲಿಕನಾದ ಮೂರನೇ ಆರೋಪಿತನು ನಮ್ಮನ್ನು ಕೂಲಿಗಾಗಿ ಇಟ್ಟುಕೊಂಡು ಲಾಡ್ಜಗೆ ಬರುವ ಪ್ರತಿ ಯೊಬ್ಬ ಪುರುಷನೋಂದಿಗೆ ಮಲಗಿಕೊಳ್ಳಬೇಕು ಅಂತಾ ಹೇಳಿದ್ದಾರೆ ಎಂದು ತಿಳಿಸಿರುತ್ತಾರೆ. ಅದಕ್ಕೆ ದಿನಾಲೂ ರೂ.500/- ಕೂಲಿ ಕೊಡುತ್ತಾನೆ ಎಂದು ತಿಳಿಸಿದಳು. ನಂತರ ಸಾಬಣ್ಣ ಇವರ ಹತ್ತಿರ ರೂ.1500/- ನಗದು ಹಣ ಮತ್ತು ಒಂದು ಕಾಂಡೋಮ್ ಪಾಕೇಟನ್ನು ವಶಕ್ಕೆ ಪಡಿಸಿಕೊಂಡಿರುತ್ತೇನೆ. ಹಾಗೂ 3 ನೇ ಆರೋಪಿತನಿಂದ ರೂ. 750/- ನಗದು ಹಣವನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ನಂತರ ಸದರಿ ಲಾಡ್ಜನ ಸಿ ಸಿ ಟಿ ವಿ, DVR ನೇದ್ದನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ನಂತರ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿ ಮೂರು ಜನ ಆರೋಪಿತರು ಮತ್ತು ಇಬ್ಬರು ಮಹಿಳೆಯೊಂದಿಗೆ ಠಾಣೆಗೆ ಹಾಜರಾಗಿ ಚಾಸಾ 15 ರವರಿಗೆ ಮುಂದಿನ ತನಿಖೆಗಾಗಿ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೂಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಜಪ್ತಿ ಪಂಚನಾಮೆಯನ್ನು ನಿ ಪಿ 2 ಎಂದು ಹಾಗೂ ಸಾಕ್ಷಿಯು ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ ಸ ಅ ರವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಸಮಯವನ್ನು ನೀಡಿ ಮುಂದೂಡಲಾಯಿತು. )

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**